ಕರ್ನಾಟಕ ಸರ್ಕಾರ

# ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001.

E-Mail: prydirector.edu.sgkar@nic.in

ಸಂಖ್ಯೆ : ಸಿ7(2)ಪ್ರಾಶಿಅ-ಭಾ.ನೀ. 58/2016-17 ದಿನಾಂಕ: 04-08-2016

## : : ಜ್ಞಾಪನಾ : :

ವಿಷಯ: ಘನ ಸರ್ವೋಚ್ಚನ್ಯಾಯಾಲಯದ ಹಾಗೂ ರಾಜ್ಯ ಉಚ್ಚ ನ್ಯಾಯಾಲಯದ ತೀರ್ಪಿನನ್ವಯ, 1994ರ ನಂತರ ಪ್ರಾರಂಭಗೊಂಡ ಕನ್ನಡ ಮಾಧ್ಯಮದ/ಇತರೆ ಮಾಧ್ಯಮ ಶಾಲೆಗಳಿಗೆ ಆಂಗ್ಲ ಮಾಧ್ಯಮದ ಬೋಧನೆಗೆ ಅವಕಾಶ ಕೋರಿದ್ದ ಪ್ರಕರಣಗಳಲ್ಲಿ, ಬೆಂಗಳೂರು ಉತ್ತರ ಜಿಲ್ಲೆಗೆ ಸಂಬಂಧಪಟ್ಟಂತೆ, 2015-16 ಸಾಲಿನಿಂದ 1-5 ನೇ ತರಗತಿ ಆಂಗ್ಲ ಮಾಧ್ಯಮ ಬೋಧನೆಗೆ ಪರಿವರ್ತನೆ ನೀಡುವ ಬಗ್ಗೆ.

ಉಲ್ಲೇಖ:1. ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ರಾಜ್ಯ ಸರ್ಕಾರವು ಸಲ್ಲಿಸಿದ್ದ ಎಸ್.ಎಲ್.ಪಿ.18139-18163/2008ನ್ನು ಸಿವಿಲ್ ಅಪೀಲ್ ಎಂದು ಪರಿಗಣಿಸಿ ಸಂವಿಧಾನ ಪೀಠಕ್ಕೆ ವರ್ಗಾವಣೆಗೊಂಡ ತರುವಾಯದಲ್ಲಿ ದಿನಾಂಕ: 06-05-2015ರಲ್ಲಿ ಹೊರಡಿಸಿರುವ ತೀರ್ಪು.

2. ದಿನಾಂಕ: 06.05.2014ರ ತೀರ್ಪಿನ ಕುರಿತು ಸಲ್ಲಿಸಲಾಗಿದ್ದ ಮರು ಪರಿಶೀಲನಾ ಅರ್ಜಿ ಸಂಖ್ಯೆ: 1878-1911/2014ರಲ್ಲಿ ದಿನಾಂಕ: 09.09.2014 ರಂದು ವಜಾ ಆದೇಶ ನಂತರದಲ್ಲಿ ರಾಜ್ಯ ಸರ್ಕಾರ ದಾಖಲಿಸಿದ್ದ ಪರಿಹಾರಾತ್ಮಕ ಅರ್ಜಿಯ (Curative Petition) ಆದೇಶ.
3. ಸರ್ಕಾರದ ಅರೆ ಸರ್ಕಾರಿ ಪತ್ರ ಸಂಖ್ಯೆ: ಇಡಿ 263 ಪಿಜಿಸಿ.2015, ದಿನಾಂಕ: 02-06-2015.
4. ಏಕ ಕಡತದಲ್ಲಿನ ಸರ್ಕಾರದ ಆದೇಶ ದಿನಾಂಕ: 06-06-2015.
5. ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ 359 ಪಿಜಿಸಿ 2015 ದಿನಾಂಕ:05-09-2015.
6. ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ಜಿಲ್ಲೆ ಇವರ ಪತ್ರ ಸಂಖ್ಯೆ: ಅನು3/ಪ್ರಾ.ಶಿ.ಅ./.ಭಾಷಾನೀತಿ/ಭಾಗ-02/2015-16 ದಿನಾಂಕ: 03-05-2016.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 1994-95ರಲ್ಲಿ ಜಾರಿಗೊಳಿಸಲಾದ ಭಾಷಾ ನೀತಿ ಕುರಿತಂತೆ ಹಲವು ಸಂಸ್ಥೆಗಳು ಮೊದಲಿಗೆ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿದ ರಿಟ್ ಅರ್ಜಿಯಲ್ಲಿ 2008ರಲ್ಲಿ ತೀರ್ಪು ಹೊರಬಿದ್ದು, ನಂತರ ಸರ್ಕಾರವು ಘನ ಸರ್ವೋಚ್ಚ ನ್ಯಾಯಾಲಯದಲ್ಲಿ ವಿಶೇಷ ರಜಾ ಅರ್ಜಿಯನ್ನು ದಾಖಲಿಸಿ ಅಂತಿಮವಾಗಿ ದಿನಾಂಕ: 06-05-2014ರಲ್ಲಿ ಘನ ಸರ್ವೋಚ್ಚ ನ್ಯಾಯಾಲಯದ ಸಂವಿಧಾನದ ಪೀಠವು ತೀರ್ಪು ನೀಡಿದ ಮತ್ತು ಕರ್ನಾಟಕ ರಾಜ್ಯ ಘನ ಉಚ್ಚ ನ್ಯಾಯಾಲಯ ಕೆಲವು ಪ್ರಕರಣಗಳಲ್ಲಿ ನಿಂದನಾ ದಾವೆಯು ಸೇರಿದಂತೆ ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ಅನುಷ್ಠಾನಗೊಳಿಸುವಂತೆ ಆದೇಶಿಸಿದೆ. ಈ ಹಿನ್ನೆಲೆಯಲ್ಲಿ 01 ರಿಂದ 05ನೇ ತರಗತಿಗೆ ಆಂಗ್ಲ ಮಾಧ್ಯಮದ ಪರಿವರ್ತನೆಗೆ ಸರ್ಕಾರವು ಉಲ್ಲೇಖ(3), (4) ಮತ್ತು (6)ರಲ್ಲಿ ಅನುಮತಿ ನೀಡಿರುತ್ತದೆ.

ಉಲ್ಲೇಖ(6)ರಲ್ಲಿ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ಜಿಲ್ಲೆ ಇವರಿಂದ ಬಂದಿರುವ ಪ್ರಸ್ತಾವನೆಗಳಲ್ಲಿ ಸದರಿ ಶಾಲೆಗಳು 01 ರಿಂದ 05ನೇ ತರಗತಿಯವರೆಗೆ ಶಾಲೆಯು ಪ್ರಾರಂಭವಾದಾಗಿನಿಂದ ನಿರಂತರವಾಗಿ ನಡೆಯುತ್ತಿದ್ದು, ಕನ್ನಡ ಮಾಧ್ಯಮದಿಂದ ಆಂಗ್ಲ ಮಾಧ್ಯಮಕ್ಕೆ ಪರಿವರ್ತನೆ ನೀಡಬಹುದೆಂದು ಉಪನಿರ್ದೇಶಕರು ಅಭಿಪ್ರಾಯ ನೀಡಿದ್ದಾರೆ. ಸದರಿಯವರ ಅಭಿಪ್ರಾಯ ಮತ್ತು ಉಲ್ಲೇಖದಲ್ಲಿನ ಸರ್ಕಾರದ ಆದೇಶಗಳಂತೆ ಕೆಳಕಂಡ 01 ಶಾಲೆಗೆ 2015-16 ನೇ ಶೈಕ್ಷಣಿಕ ಸಾಲಿನಿಂದ 01 ರಿಂದ 05ನೇ ತರಗತಿಗಳಲ್ಲಿ ಆಂಗ್ಲ ಮಾಧ್ಯಮದಲ್ಲಿ ಬೋಧಿಸಲು ಕೆಳಗಿನ ಷರತ್ತುಗಳಿಗೊಳಪಟ್ಟು ಅನುಮತಿ ನೀಡಿ ಆದೇಶಿದೆ.

1. ಎಲ್ಲಾ ಸಂಸ್ಥೆಗಳಿಂದ ಕರ್ನಾಟಕ ಶಿಕ್ಷಣ ಕಾಯ್ದೆ ನಿಯಮಾವಳಿಗಳನ್ವಯ ನಮೂನೆ-3ರಲ್ಲಿ ಅಗತ್ಯ ವಿವರಗಳನ್ನು ನಮೂದಿಸಿ 01 ರಿಂದ 05ನೇ ತರಗತಿ ಕನ್ನಡ ಮಾಧ್ಯಮದ ತರಗತಿಗಳನ್ನು ನಡೆಸಲು ವಿತರಿಸಲಾಗಿದ್ದ ಮೂಲ ನೋಂದಣಿ ಪ್ರಮಾಣ ಪತ್ರವನ್ನು ಉಪನಿರ್ದೇಶಕರು 15 ದಿನಗಳೊಳಗೆ ಪಡೆದು ಸಲ್ಲಿಸಿದ ನಂತರದಲ್ಲಿ ನಮೂನೆ-4ರಲ್ಲಿ ಆಂಗ್ಲ ಮಾಧ್ಯಮಕ್ಕೆ ಪರಿಷ್ಕೃತ ನೋಂದಣಿ ಅನುಮತಿಯನ್ನು ವಿತರಿಸಲಾಗುವುದು.
2. ಕ್ಷೇತ್ರ ಶಿಕ್ಷಣಾಧಿಕಾರಿಗಳು/ ಉಪನಿರ್ದೇಶಕರು ಶಿಫಾರಸ್ಸು ಮಾಡಿ ದೃಢೀಕರಿಸಿ ಸಲ್ಲಿಸಿರುವ ವರದಿ ಮತ್ತು ದಾಖಲೆಗಳ ಆಧಾರದ ಮೇಲೆ ಅನುಮತಿಯನ್ನು ನೀಡಲಾಗಿದೆ.
3. ಕರ್ನಾಟಕ ಶಿಕ್ಷಣ ಕಾಯ್ದೆ ನಿಯಮಾವಳಿಗಳು ಹಾಗೂ ಕಾಲದಿಂದ ಕಾಲಕ್ಕೆ ಹೊರಡಿಸಲಾಗಿರುವ ಆದೇಶ/ ಸುತ್ತೋಲೆಗಳಂತೆ ಕ್ರಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
4. ಕಡ್ಡಾಯ ಶಿಕ್ಷಣ ಕಾಯ್ದೆ ನಿಯಮಗಳು ಜಾರಿಯಲ್ಲಿದೆ. ಅದರಂತೆ ಅಗತ್ಯವಿರುವ ಎಲ್ಲಾ ಸೌಲಭ್ಯಗಳನ್ನು ಹಾಗೂ ಗುಣಾತ್ಮಕ ಶಿಕ್ಷಣವನ್ನು ಒದಗಿಸತಕ್ಕದ್ದು.
5. ಜಾರಿಯಲ್ಲಿರುವ ಶುಲ್ಕದ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
6. ಮೂಲಭೂತ ಸೌಲಭ್ಯಗಳ ಕೊರತೆಯನ್ನು ಸಂಸ್ಥೆಯು ಮುಂದಿನ ದಿನಗಳಲ್ಲಿ ಸರಿಪಡಿಸಿಕೊಳ್ಳತಕ್ಕದ್ದು ಹಾಗೂ ಮೂಲಭೂತ ಸೌಲಭ್ಯಗಳ ಬಗ್ಗೆ ಪರಿಶೀಲಿಸಲಾಗುವುದು.
7. ಸಂಸ್ಥೆಯ ಯಾವುದೇ ದಾಖಲೆಗಳ ನೈಜತೆಯ ಬಗ್ಗೆ ವ್ಯತಿರಿಕ್ತ ವರದಿ ಸಲ್ಲಿಕೆಯಾದ ಪ್ರಸಂಗದಲ್ಲಿ ತಪ್ಪು ಮಾಹಿತಿ ಸಲ್ಲಿಕೆಯಾಗಿರುವುದು ಗಮನಕ್ಕೆ ಬಂದಲ್ಲಿ, ತಕ್ಷಣವೇ ಏಕಪಕ್ಷೀಯವಾಗಿ ಹಾಗೂ ಯಾವುದೇ ಸಮಜಾಯಿಷಿಗೆ ಅವಕಾಶ ನೀಡದೇ ಪ್ರಸ್ತುತ ಅನುಮತಿಯನ್ನು ಹಿಂಪಡೆಯುವ ಅಧಿಕಾರವನ್ನು ಕಾಯ್ದಿರಿಸಿಕೊಳ್ಳಲಾಗಿದೆ.
8. ಉಪನಿರ್ದೇಶಕರು ಪರಿವರ್ತನೆಯನ್ನು ಪರಿಗಣಿಸಿ ಅಗತ್ಯ ಕ್ರಮಗಳನ್ನು ನಿಯಮಾನುಸಾರ ಕೈಗೊಳ್ಳತಕ್ಕದ್ದು.

| ಕ್ರ.ಸಂ. | ಸಂಸ್ಥೆಯ ಹೆಸರು ಮತ್ತು ವಿಳಾಸ | ಶಾಲೆಯ ಹೆಸರು ಮತ್ತು ವಿಳಾಸ |
|---|---|---|
| 01. | **ಕೊಡವ ಸಮಾಜ ಎಜುಕೇಷನ್ ಕೌನ್ಸಿಲ್, ಡಬಲ್ ರೋಡ್, ಇಂದಿರಾನಗರ, 2ನೇ ಹಂತ, ಬೆಂಗಳೂರು-38.** | **ಶ್ರೀ ಕಾವೇರಿ ಶಾಲೆ, ನಂ.21/22, 14ನೇ ಅಡ್ಡರಸ್ತೆ, ಹೆಚ್.ಇ.ಎಲ್. ಮಿನಿ ಕಾಲೋನಿ, ಪೈಪ್ ಲೈನ್, ಟಿ. ದಾಸರಹಳ್ಳಿ, ಬೆಂಗಳೂರು-57.** |

***ಮಾನ್ಯ ಆಯುಕ್ತರ ಆದೇಶದ ಮೇರೆಗೆ***

[ಕೆ.ಆನಂದ]
ನಿರ್ದೇಶಕರು [ಪ್ರಾಥಮಿಕ ಶಿಕ್ಷಣ]
ಹಾಗೂ ನೋಂದಣಿ ಪ್ರಾಧಿಕಾರಿಗಳ ಪರವಾಗಿ

<u>ಇವರಿಗೆ,</u>

1. ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ಜಿಲ್ಲೆ, ಕೆ.ಜಿ. ರಸ್ತೆ, ಬೆಂಗಳೂರು.
2. ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ವಲಯ-01, 2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು.
3. ಕಾರ್ಯದರ್ಶಿಗಳು, **ಕೊಡವ ಸಮಾಜ ಎಜುಕೇಷನ್ ಕೌನ್ಸಿಲ್, ಡಬಲ್ ರೋಡ್, ಇಂದಿರಾನಗರ, 2ನೇ ಹಂತ, ಬೆಂಗಳೂರು-38.**
4. ಕಛೇರಿ ಪ್ರತಿ